ಈ ದಿನ ದಿನಾಂಕಃ 24-10-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು 2ನೇ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಿ ವಕೀಲರಿಂದಃ</u>**

2020 ನೇ ಸಾಲಿನಲ್ಲಿ ನಾನು ಖರೀದಿಸಿದ ದಾವಾ ಸ್ವತ್ತಿಗೆ ಸಂಬಂಧಪಟ್ಟ ಪಹಣಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಸದರಿ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಮೆಕ್ಕೆಜೋಳ ಬೆಳೆ ಇತ್ತು. ಸದರಿ ದಾವಾ ಸ್ವತ್ತು ನಾನು ಖರೀದಿಸುವ ಕಾಲಕ್ಕೆ ಇರಿಯಮ್ಮನ ಹೆಸರಿನಲ್ಲಿತ್ತು. 2020-21 ನೇ ಸಾಲಿನ ಇರಿಯಮ್ಮನ ಹೆಸರಿನಲ್ಲಿರುವ ಪಹಣಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಿಪಿ 9 ಪಹಣಿಯಲ್ಲಿ ಕಾಲಂ ನಂಃ 13 ರಲ್ಲಿ ಬೀಳು ಎಂದು ನಮೂದಿಸಿರುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಮೆಕ್ಕೆಜೋಳ ಹಾಗೂ ಬೀಳು ಎಂದು ನಮೂದಿಸಿರುತ್ತಾರೆ ಎಂದು ಹೇಳಿರುತ್ತಾರೆ. ನಿಪಿ 8 ರಲ್ಲಿರುವ ಪಹಣಿಯ ಕಾಲಂ ನಂಃ 13 ರಲ್ಲಿ ಬೆಳೆಯ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಆ ಕಾಲಕ್ಕೆ ಬೆಳೆ ಸಮೀಕ್ಷೆ ಮಾಡಿರಲಿಲ್ಲ ಅದಕ್ಕೆ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 2 ರಲ್ಲಿರುವ 2020-21 ನೇ ಸಾಲಿನ ನನ್ನ ಹೆಸರಿನಲ್ಲಿರುವ ಪಹಣಿಯ ಕಾಲಂ ನಂಃ 13 ರಲ್ಲಿ ಬೆಳೆಯ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಆ ಕಾಲಕ್ಕೆ ಬೆಳೆ ಸಮೀಕ್ಷೆ ಮಾಡಿರಲಿಲ್ಲ, 2023-24 ನೇ ಸಾಲಿನಲ್ಲಿ ಸಮೀಕ್ಷೆ ಮಾಡಿರುತ್ತಾರೆ ಹಾಗಾಗಿ ಸದರಿ ಪಹಣಿಯಲ್ಲಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. 2023 ಕ್ಕಿಂತ ಮುಂಚೆ ಬೆಳೆ ದೃಢೀಕರಣ ಪತ್ರವನ್ನು ಪಡೆದಿರುವುದಿಲ್ಲ ಎಂದರೆ ಸರಿ . ನಿಪಿ 14 ರಲ್ಲಿರುವ ಬೆಳೆ ದೃಢೀಕರಣ ಪತ್ರ ಪ್ರಸ್ತುತ ದಾವೆಗಾಗಿ ಸೃಷ್ಟಿ ಮಾಡಿಕೊಂಡಿರುವ ದಾಖಲೆ ಎಂದರೆ

ಸರಿಯಲ್ಲ. ಬೆಳೆ ದೃಢೀಕರಣ ಪತ್ರವನ್ನು ನೀಡುವ ಪೂರ್ವದಲ್ಲಿ ಬೆಳೆ ಸಮೀಕ್ಷೆ ಮಾಡಿ ಪತ್ರ ನೀಡುತ್ತಾರೆ ಎಂದರೆ ಸರಿ . ಬೆಳೆ ದೃಢೀಕರಣ ಪತ್ರವನ್ನು ಪಡೆಯುವ ಕಾಲಕ್ಕೆ ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆಂದು ನನಗೆ ಗೊತ್ತಿಲ್ಲ. ಇರಿಯಮ್ಮ ರವರು ಮೆಕ್ಕೆಜೋಳವನ್ನು ಬೆಳೆಯುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ .

ಸಾಕ್ಷಿಗೆ 2008-09 ನೇ ಸಾಲಿನಿಂದ 2014-15 ರವರೆಗಿನ ಪಹಣಿಗಳನ್ನು ತೋರಿಸಿದಾಗ ಇರಿಯಮ್ಮನ ಹೆಸರಿಗೆ ಇರುತ್ತವೆ ಎಂದು ಒಪ್ಪಿರುವುದರಿಂದ ನಿಡಿ 1 ರಿಂದ 7 ಎಂದು ಗುರುತಿಸಲಾಯಿತು. ನಿಡಿ 1 ರಿಂದ 7 ರಲ್ಲಿರುವ ಪಹಣಿಗಳಲ್ಲಿ ಇರಿಯಮ್ಮ ಸ್ವಾಧೀನದಲ್ಲಿ ಇಲ್ಲದಿರುವುದರಿಂದ ಕಾಲಂ ನಂಃ 13 ರಲ್ಲಿ ಬೀಳು ಎಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಮೊದಲ ವಿಚಾರ ನನಗೆ ಗೊತ್ತಿಲ್ಲ, ಆದರೆ ಮೆಕ್ಕೆಜೋಳವನ್ನು ಬೆಳೆಯುತ್ತಿದ್ದರು ಎಂದು ನುಡಿಯುತ್ತಾರೆ.

1ನೇ ಪ್ರತಿವಾದಿಯ ಆಸ್ತಿಯ ಉತ್ತರ ಭಾಗಕ್ಕೆ 2ನೇ ಪ್ರತಿವಾದಿಯ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಆಸ್ತಿಯ ವಾಯುವ್ಯ ದಿಕ್ಕಿಗೆ 2ನೇ ಪ್ರತಿವಾದಿಯ ಆಸ್ತಿ ಬರುತ್ತದೆ. ಸದರಿ ದಿಕ್ಕಿಗೆ 2ನೇ ಪ್ರತಿವಾದಿಯ ಆಸ್ತಿ ಇರುತ್ತದೆ ಎಂದು ರುಜುವಾತುಪಡಿಸಲು ಇರುವ ಯಾವುದೇ ದಾಖಲೆಯನ್ನು ನಾನು ನೋಡಿರುವುದಿಲ್ಲ. ದಾವಾ ಷೆಡ್ಯೂಲ್ ನಲ್ಲಿ ನಮೂದಿಸಿರುವ ಚೆಕ್ಕುಬಂಧಿಯ ಯಾವುದೇ ದಿಕ್ಕಿನಲ್ಲೂ 2ನೇ ಪ್ರತಿವಾದಿಯ ಆಸ್ತಿ ಇರುವುದಿಲ್ಲ ಎಂದರೆ ಸರಿ . 1ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ದಾವಾ ಸ್ವತ್ತಿನ ಮಾರಾಟಗಾರರು ಯಾವುದೇ ಕಾಲಕ್ಕೂ ದಾವಾ ಸ್ವತ್ತಿನಲ್ಲಿ ಅನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಮಾರಾಟಗಾರರು ಈರಪ್ಪ ಬಿನ್ ಹೂವಪ್ಪ ರವರ ಕುಟುಂಬಕ್ಕೆ ಸಂಬಂಧಪಟ್ಟವರೇ ಹೊರತು ಈರಪ್ಪ ಬಿನ್ ಹುಚ್ಚಪ್ಪ ರವರ ಕುಟುಂಬಕ್ಕೆ ಸಂಬಂಧಿಸಿದವರಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿ

ಮಾರಾಟ ಮಾಡಿದ ಈರಪ್ಪ ಬಿನ್ ಹುಚ್ಚಪ್ಪ ರವರು ವಾರಸುದಾರರೆಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ .

**ಮರುವಿಚಾರಣೆ ಇರುವುದಿಲ್ಲ .**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

Sd/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.